**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಜೇವರ್ಗಿ.**

ಉಪಸ್ಥಿತರು

**ಶ್ರೀ ನಾಮದೇವ ಕಾಮಣ್ಣ ಸಾಲಮಂಟಪಿ**

ಬಿ.ಎ. ಎಲ್.ಎಲ್ ಬಿ(ಸ್ಪೆಷಲ್)

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಜೇವರ್ಗಿ.

ಆದೇಶದ ದಿನಾಂಕ 16ನೇ ಡಿಸೆಂಬರ್ 2016.

ಎಫ್.ಡಿ.ಪಿ. ಸಂಖ್ಯೆ: 8/2013

**ಅರ್ಜಿದಾರ ಃ** ನಾಗಮ್ಮ ಗಂ ಕರೆಪ್ಪ ಬೆಂಕೋಟಗಿ
( ತಂ. ದಿ. ಸಿದ್ರಾಮಪ್ಪ ಬಿರಾದಾರ)
ವಯಸ್ಸು 47 ವರ್ಷ, ಉದ್ಯೋಗ ಒಕ್ಕಲುತನ ಸಾಃ
ಹಾಲಗತ್ತರಗಾ, ತಾಃ ಜೇವರ್ಗಿ ಜಿ. ಗುಲಬರ್ಗಾ.

( ಶ್ರೀ ಜೆ.ವಿ.ಎಚ್. ವಕೀಲರು)

**- ಃ ವಿರುದ್ಧ ಃ-**

**ಎದುರುದಾರರು ಃ** 1. ಚಂದವ್ವ ಗಂ ದಿ ಸಿದ್ರಾಮಪ್ಪ ಬಿರಾದಾರ
ವಯಸ್ಸು 70 ವರ್ಷ, ಉದ್ಯೋಗ ಒಕ್ಕಲುತನ
ಸಾಃ ಹಾಲಗತ್ತರಗಾ, ತಾಃ ಜೇವರ್ಗಿ ಜಿ. ಗುಲಬರ್ಗಾ.
ಮತ್ತು ಇತರರು.

( ಶ್ರೀ ಬಿ.ಬಿ. ವಕೀಲರು)

**ಮಧ್ಯಂತರ ಅರ್ಜಿ ನಂ.5**

**ಅರ್ಜಿದಾರ** ಃ ಶ್ರೀ ಶರಣಗೌಡ ತಂ ಚಂದ್ರಮಪ್ಪ ಕಾಳಗಿ

**-ಃವಿರುದ್ಧಃ-**

**ಎದುರುದಾರ** ಃ ನಾಗಮ್ಮ ತಂ ಕರೆಪ್ಪ ಬೆಂಕೋಟಗಿ

## ಮಧ್ಯಂತರ ಅರ್ಜಿ ನಂಬರ 5 ರ ಮೇಲೆ ಆದೇಶ

1. 4ನೇ ಎದುದಾರನ ಪರ ವಕೀಲರು ಮಧ್ಯಂತರ ಅರ್ಜಿ 5ನ್ನು ಸಿ.ಪಿ.ಸಿ. ಕ್ರಮಾದೇಶ 20 ನಿಯಮ 18 ರ ಅಡಿಯಲ್ಲಿ ಸಲ್ಲಿಸಿ ಹಿಂದು ಜಂಟಿ ಕುಟುಂಬದ ಮಗಳ ಹಕ್ಕಿನ ಕಾನೂನಲ್ಲಿ ಆದ ಬದಲಾವಣೆಯಿಂದ ಪಕ್ಷಗಾರರ ಪಾಲಿನಲ್ಲಿ ಮರು ಹೊಂದಾಣಿಕೆ ಮಾಡುವಂತೆ ವಿನಂತಿಸುತ್ತಾರೆ.

2. ಈ ಅರ್ಜಿಗೆ ಆಧಾರವಾಗಿ 4ನೇ ಎದುರುದಾರ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿ ವಾದಿಯು ಪ್ರತಿವಾದಿಯರ ವಿರುದ್ಧ ಪಾಲು ವಿಭಜನೆ ಮತ್ತು ಪ್ರತ್ಯೇಕ ಹಿಸ್ಸೆ ಕುರಿತು ಅಸಲ ದಾವೆ ನಂ. 138ಃ2012 ಸಲ್ಲಿಸಿದ್ದು ಅದು ಡಿಕ್ರಿ ಆಗಿರುತ್ತದೆ. ವಾದಿಯು 4ಃ9 ಹಿಸ್ಸೆ ಪಡೆಯಲು ಅರ್ಹರಿರುತ್ತಾಳೆ ಅಂತಾ ಡಿಕ್ರಿ ಆಗಿದ್ದು ಇರುತ್ತದೆ. ಸದರಿ ಆದೇಶವನ್ನು ಪ್ರಶ್ನೀಸಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾ ಗೊಂಡಿರುತ್ತದೆ. ನಂತರ ಸದರಿ ಆದೇಶವನ್ನು ಗೌರವಾನ್ವಿಕ ಕರ್ನಾಟಕ ಉಚ್ಚಬ್ಯಾಯಾಲಯದಲ್ಲಿ ಪ್ರಶ್ನೀಸಿದ್ದು ಸದರಿ ಆರ್ಎಸ್ಎ ಕೂಡ ವಜಾಗೊಂಡಿರುತ್ತದೆ. ವಾದಿಯ ತಂದೆಯು ದಿನಾಂಕ 9-9-2005 ರ ಮೊದಲ ಮರಣಹೊಂದಿರುವ ಬಗ್ಗೆ ಯಾವುದೆ ತಕರಾರು ಇರುವುದಿಲ್ಲ. ಪ್ರಕಾಶ ವಿರುದ್ಧ ಕಲಾವತಿ ಪ್ರಕರಣದಲ್ಲಿ ಮಗಳು ಕೋಪಾರ್ಶನರ ಅಂತಾ ಆಸ್ತಿಯಲ್ಲಿ ಹಕ್ಕು ಪಡೆದುಕೊಳ್ಳಬೇಕಾದರೆ ಅವಳ ತಂದೆ ದಿನಾಂಕ 9-9-2005 ರಂದು ಜೀವಂತ ಇರಬೇಕು. ಸದರಿ ಪ್ರಕರಣದಲ್ಲಿ ವಾದಿಯ ತಂದೆಯು 20 ವರ್ಷಗಳ ಹಿಂದೆ ಮಗಣಹೊಂದಿರುತ್ತಾರೆ ಎಂದು ವಾದ ಪತ್ರದಿಂದ ಕಂಡು ಬರುತ್ತದೆ. ಆದ್ದರಿಂದ ಕಾನೂನಿನಲ್ಲಿ ಆದ ಬದಲಾವಣೆಯಿಂದ ಮೊದಲು ಮಾಡಿದ ಪ್ರಾಥಮೀಕ ಡಿಕ್ರಿಯಲ್ಲಿ ಬದಲಾವಣೆ ಮಾಡಿ ಹಿಸ್ಸೆಗಳನ್ನು ಮರುಹೊಂದಾಣಿಕೆ ಮಾಡಿ ಇನ್ನೊಂದು ಹೊಸ ಪ್ರಾಥಮಿಕ ಡಿಕ್ರಿಯನ್ನು ಬರೆಯಬೇಕೆಂದು ವಿನಂತಿಸುತ್ತಾರೆ.

3. ಅರ್ಜಿದಾರ ಸದರಿ ಅರ್ಜಿಗೆ ತಮ್ಮ ಲಿಖಿತ ತಕರಾರು ಸಲ್ಲಿಸಿದ್ದು, ಈ ನ್ಯಾಯಾಲಯವು ದಿನಾಂಕ 19-11-2012 ರಂದು ಅಸಲ ದಾವೆ ನಂ.138ಃ2012 ನ್ನು ಡಿಕ್ರಿಗೊಳಿಸಿದ್ದು ಅದನ್ನು ಪ್ರಶ್ನೀಸಿ ಎದುರುದಾರರು ಆರ್‌ಎ ನಂ.4ಃ2013 ನ್ನು ಸಲ್ಲಿಸಿದ್ದು ಸದರಿ ಪ್ರಕರಣವು ವಜಾಗೊಂಡಿರುತ್ತದೆ ನಂತರ ಅದನ್ನು ಪ್ರಶ್ನೀಸಿ ಆರ್‌ಎಸ್‌ಎ ನಂ.200017ಃ2014 ನ್ನು ಗೌರವಾನ್ವಿತ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣವು ವಜಾಗೊಂಡಿದ್ದು ಇರುತ್ತದೆ. ಅರ್ಜಿದಾರರು ಎಲ್ಲಾ ಆಸ್ತಿಗಳನ್ನು ಮತ್ತು ಪಕ್ಷಗಾರರನ್ನು ದಾವೆಯಲ್ಲಿ ಸೇರಿಸಿದ್ದು ಇರುತ್ತದೆ. ದಾವೆ ಡಿಕ್ರಿಯಾಗಿ ಪ್ರಾಥಮಿಕ ಡಿಕ್ರಿ ಬರೆಯಲ್ಪಟ್ಟಿರುತ್ತದೆ. ನಂತರ ಅರ್ಜಿದಾರರು ಈ ಎಫ್‌ಡಿಪಿಯನ್ನು ಸಲ್ಲಿಸಿದ್ದು ಇರುತ್ತದೆ. ಆದದರಿಂದ ಪಕ್ಷಗಾರರ ಹಿಸ್ಸೆಗಳಲ್ಲಿ ಮರುಹೊಂದಾಣಿಕೆ ಮಾಡಿ ಪ್ರಾಥಮಿಕ ಡಿಕ್ರಿ ಬರೆಯುವುದು ಅವಶ್ಯಕ ಇರುವುದಿಲ್ಲ, ಮತ್ತು ಎದುರುದಾರರು ಸಲ್ಲಿಸಿದ್ದು ತೀರ್ಪುಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ, ಇತರೆ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ತೀರಸ್ಕರಿಸಬೇಕೆಂದು ವಿನಂಸುತ್ತಾರೆ.

4. ವಾದಿ ಪರ ವಕೀಲರ ವಾದ ಆಲಿಸಿದ್ದೇನೆ. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

5. ಕೆಳಕಂಡ ಅಂಶಗಳು ತೀರ್ಮಾನಿಸುವದು ಅವಶ್ಯಕವೆಂದು ಕಂಡು ಬರುತ್ತದೆ.

   **1. ಅರ್ಜಿದಾರಃ4ನೇ ಎದುರುದಾರ ತನ್ನ ಅರ್ಜಿಯನ್ನು ಪುರಸ್ಕರಿಸಲು ಸಾಕಷ್ಟು ಕಾರಣಗಳಿವೆ ಎಂಬುದನ್ನು ರುಜುವಾತು ಪಡಿಸುತ್ತಾನೇಯೇ?**

   **2. ಯಾವ ಆದೇಶ?**

6. ಮೇಲಿನ ಅಂಶಗಳ ಬಗ್ಗೆ ಕೆಳಕಂಡಂತೆ ಉತ್ತರಿಸಿದ್ದೇನೆ.

   ಅಂಶ 1 ಃ ನಕಾರಾತ್ಮಕವಾಗಿ.

   ಅಂಶ 2 ಃ ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

7. **ಅಂಶ 1 :-** 4ನೇ ಎದುರುದಾರನ ಪರ ವಕೀಲರು ಕಾನೂನಲ್ಲಿ ಆದ ಬದಲಾವಣೆಯಿಂದ ಪಕ್ಷಗಾರರ ಹಿಸ್ಸೆಗಳಲ್ಲಿ ಮರಹೊಂದಾಣಿಕೆ ಮಾಡಿ ಇನ್ನೊಂದು ಪ್ರಾಥಮಿಕ ಡಿಕ್ರಿ ಬರೆಯಬೇಕೆಂದು ವಿನಂತಿಸುತ್ತಾರೆ. ಮತ್ತು ತಮ್ಮ ವಾದಮಂಡನೆ ಆಧಾರವಾಗಿ 2015 (4) ಕೆಸಿಸಿಆರ್ 3265 (ಎಸ್‌ಸಿ) ಇದರಲ್ಲಿ ಪ್ರಕರಣಗೊಂಡ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಕರಣವಾದ ಪ್ರಕಾಶ ಮತ್ತು ಇತರರು ವಿರುದ್ಧ ಫುಲಾವತಿ ಈ ಪ್ರಕರಣದ ಮೇಲೆ ಅವಲಂಬಿತವಾಗುತ್ತಾರೆ. ಸದರಿ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮಗಳು ತಾನು ಕೋಪಾರ್ಶನರ ಅಂತಾ ಆಸ್ತಿಯಲ್ಲಿ ಪಾಲನ್ನು ಪಡೆಯಬೇಕಾದರೆ ದಿನಾಂಕ 9-9-2005 ರಂದು ತಂದೆ ಬದುಕಿರಬೇಕೆಂದು ಹೇಳಿದ್ದು ಇರುತ್ತದೆ. ತಮ್ಮ ವಾದ ಮಂಡನೆಗೆ ಆಧಾರವಾಗಿ 4ನೇ ಎದುರುದಾರನ ಪರ ವಕೀಲರು ಇನ್ನೊಂದು ಪ್ರಕರಣ 2016(1) ಕೆಸಿಸಿಆರ್ 475 ಇದರಲ್ಲಿ ಪ್ರಕರಣಗೊಂಡ ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯದ ಪ್ರಕರವಾದ ಶ್ರೀಮತಿ ಹೋನಮ್ಮ ವಿರುದ್ಧ ಸಿ.ಎಚ್.ಹೊನ್ನೆಗೌಡ ಮತ್ತು ಇತರರು ಈ ಪ್ರಕರಣದ ಮೇಲೆ ಅವಲಂಬಿತರಾಗಿದ್ದಾರೆ. ಈ ಪ್ರಕರಣದಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯ ಇದರಲ್ಲಿ ಒಂದರಕ್ಕಿಂತಲು ಹೆಚ್ಚ ಪ್ರಾಥಮಿಕ ಡಿಕ್ರಿ ಬರೆಯಲು ಯಾವುದೆ ಅಡ್ಡಿ ಇರುವುದಿಲ್ಲ ಅಂತಾ ಹೇಳಿದ್ದು ಇರುತ್ತದೆ.

8. ಕಡತವನ್ನು ಪರಿಶೀಲಿಸಿ ನೋಡಲಾಗಿ 4ನೇ ಎದುರುದಾರನು ಅರ್ಜಿದಾರರಿಗೆ ಮತ್ತು ಅವರ ಆಸ್ತಿಗೆ ಮತ್ತು ಅವರ ಕುಟುಂಬದ ಆಸ್ತಿಗೆ ಯಾವುದೆ ರೀತಿಯ ಸಂಬಂಧ ಹೊಂದಿರುವುದಿಲ್ಲ ಅಂತಾ ಕಂಡುಬರುತ್ತದೆ. ಕಾನೂನಿನಲ್ಲಿಯಾದ ಬದಲಾವಣೆಯಿಂದ ಪಾಲು ಹಿಸ್ಸೆಗಳಲ್ಲಿ ಮರಹೊಂದಾಣಿಕೆ ಮಾಡಿ ಇನ್ನೊಂದು ಪ್ರಾಥಮಿಕ ಡಿಕ್ರಿ ಬರೆಯಬೇಕೆಂದು ಕೇಳಲು ಆತನಿಗೆ ಯಾವುದೆ ಹಕ್ಕು ಇರುವುದಿಲ್ಲ. 4ನೇ ಎದುರುದಾರನು 3ನೇ ಎದುರುದಾರರ ಗಂಡನಿದ್ದು, ಆತನು 3ನೇ ಎದುರುದಾರರಿಂದ

ದಾವಾ ಆಸ್ತಿ ಸರ್ವೆ ನಂ.47ಃ1 ನ್ನು ಖರೀದಿಸಿದ್ದು ಸದರಿ ಖರೀದಿಯು ವಾದಿಯ ಹಿಸ್ಸೆಯ ಮೇಲೆ ಬಂಧನಕಾರಕ ಇರುವುದಿಲ್ಲವೆಂದು ಈ ನ್ಯಾಯಾಲಯವು ಅಸಲ ದಾವಾ ಸಂಖ್ಯೆ 138ಃ2012 ರಲ್ಲಿ ಅಭಿಪ್ರಾಯವನ್ನು ಪಟ್ಟಿದ್ದು ಇರುತ್ತದೆ. ಅಸಲ ದಾವಾ ಸಂಖ್ಯೆ 138ಃ2012 ರಲ್ಲಿ ಹೊರಡಿಸಿರುವ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ, ಎದುರುದಾರರು ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಲಯವು ಈ ನ್ಯಾಯಾಲದಲ್ಲಿ ಹೊರಡಿಸಿದ ಅಸಲ ದಾವಾ ಸಂಖ್ಯೆ138ಃ2012 ರಲ್ಲಿ ಹೊರಡಿಸಿದ ಆದೇಶವನ್ನು ಎತ್ತಿಹಿಡಿದು, ಎದುರುದಾರರು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಿದ್ದು ಇರುತ್ತದೆ. ನಂತರ ಎದುರುದಾರರು ಸದರಿ ಆದೇಶವನ್ನು ಗೌರವಾನ್ವಿತ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಆರ್.ಎಸ್.ಎ. ನಂ.200017ಃ2014 ರಲ್ಲಿ ಪ್ರಶ್ನಿಸಿದ್ದು, ಸದರಿ ಮೇಲ್ಮನವಿಯನ್ನು ಗೌರವಾನ್ವಿತ ಕರ್ನಾಟಕ ಉಚ್ಛನ್ಯಾಯಾಲಯವು ತಿರಸ್ಕರಿಸಿದ್ದು ಇರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಎದುರುದಾರರ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಹೀಗಿರುವಾಗ ವಾದಿಗೆ ಮತ್ತು ವಾದಿ ಕುಟುಂಬದ ಆಸ್ತಿಗಳಿಗೆ ಸಂಬಂಧಿವಿಲ್ಲದ 4ನೇ ಎದುರುದಾರರು ಕಾನುನಿನಲ್ಲಿಯಾದ ಹೊಸ ಬದಲಾವಣೆಯಿಂದ ದಾವಾ ಆಸ್ತಿಗಳಲ್ಲಿ ಮರುಹೊಂದಾಣಿಕೆ ಮಾಡಿಕೊಂಡುವಂತೆ ಕೇಳಲು ಬರುವುದಿಲ್ಲ. ದಾವಾ ಆಸ್ತಿಗಳಲ್ಲಿ ಹಕ್ಕನ್ನು ಹೊಂದಿದ್ದ 1 ರಿಂದ 3ನೇ ಎದುರುದಾರರು ಕಾನೂನಿನಲ್ಲಿಯಾದ ಹೊಸ ಬದಲಾವಣೆಯಿಂದ ಆಸ್ತಿಗಳಲ್ಲಿ ಮರುಹೊಂದಾಣಿಕೆ ಮಾಡಿಕೊಂಡುವಂತೆ ಕೇಳಿರುವುದಿಲ್ಲ. ಆದ್ದರಿಂದ ಈ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ 4ನೇ ಎದುರುದಾರರು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಯೋಗ್ಯವಾಗಿರುವುದಿಲ್ಲಾ, ಆದ್ದರಿಂದ 1ನೇ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

9. **ಅಂಶ 2ಃ-** ಮೇಲಿನ ಚರ್ಚೆಯಿಂದ ಈ ಕೆಳಗಿನಂತೆ ಆದೇಶ ಮಾಡಿದ್ದೇನೆ.

# ಆದೇಶ

**ಅರ್ಜಿದಾರಃ4ನೇ ಎದುರುದಾರ ಸಿಪಿಸಿ ಕ್ರಮಾದೇಶ 20 ನಿಯಮ 18 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 5 ನ್ನು ಈ ಮೂಲಕ ಖರ್ಚಿನೊಂದಿಗೆ ತೀರಸ್ಕರಿಸಲಾಗಿದೆ.**

( ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೇಲೆ ಉಕ್ತಲೇಖನ ಕೊಟ್ಟು , ಆತ ಬೆರಳಚ್ಚು ಮಾಡಿದ ನಂತರ ತಪ್ಪಿದಲ್ಲಿ ತಿದ್ದಿ ಇವತ್ತು ದಿನಾಂಕ 16ನೇ ಡಿಸೆಂಬರ್ 2016 ರಂದು ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ನಾಮದೇವ ಕಾಮಣ್ಣ ಸಾಲಮಂಟಪಿ)**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.

ಜೇವರ್ಗಿ.